# ಪ್ರಥಮ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ –2022–23
## (ಕಲಿಕಾ ಫಲ ಆಧಾರಿತ)
## 9ನೇ ತರಗತಿ – ಕನ್ನಡ

**ಗರಿಷ್ಠ ಅಂಕ : 100** **ಅವಧಿ:3.ಗಂಟೆ 15 ನಿಮಿಷ**

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.**

**1. ಕ, ಗ, ಎ, ಬ, ಅ, ಚ, ಔ, ಶ, ಯ, ಋ, ಠ – ಇವುಗಳಲ್ಲಿರುವ ಸ್ವರಾಕ್ಷರಗಳ ಸಂಖ್ಯೆ ; 1*6=6**

(ಎ) 4 (ಬಿ) 7

(ಸಿ) 5 (ಡಿ) 11

**2. ಕೆಳಗೆ ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಶಬ್ದರೂಪ ;**

(ಎ) ಕಟ್ವಡ (ಬಿ) ಕಟ್ಡಡ

(ಸಿ) ಕಟ್ಟಡ (ಡಿ) ಕಟ್ಟಡ

**3. ಮರದ ಮೇಲಿರುವ ಗಿಳಿಗಳನ್ನು ಸೋಮು ನೋಡುತ್ತಿದ್ದಾನೆ. –ಈ ವಾಕ್ಯದಲ್ಲಿರುವ ಕ್ರಿಯಾಪದ;**

(ಎ) ಮರದ (ಬಿ) ಗಿಳಿಗಳನ್ನು

(ಸಿ) ಸೋಮು (ಡಿ) ನೋಡುತ್ತಿದ್ದಾನೆ

**4. ಕಾಡು – ಈ ಪದದ ನಾನಾರ್ಥಕ ಪದಗಳು ;**

(ಎ) ಅರಣ್ಯ – ಅತಿ (ಬಿ) ಅರಣ್ಯ – ಪೀಡಿಸು

(ಸಿ) ವನ – ಬೆಟ್ಟ (ಡಿ) ಅರಣ್ಯ – ಮೃಗ

**5. ಭೂತಕಾಲ ರೂಪದಲ್ಲಿರುವ ವಾಕ್ಯ ;**

(ಎ) ಬಾಲಕ ಪಾಠ ಓದಿದನು. (ಬಿ) ಬಾಲಕ ಪಾಠ ಓದುತ್ತಿದ್ದಾನೆ.

(ಸಿ) ಬಾಲಕಿ ಪಾಠ ಓದುವಳು. (ಡಿ) ಬಾಲಕಿ ಪಾಠ ಓದುತ್ತಿದ್ದಾಳೆ.

**6. ಈ ಕೆಳಗಿನವುಗಳಲ್ಲಿ ಸರಿಯಾದ ಅಕರಾದಿ ರೂಪ ;**

(ಎ) ಆಕಾಶ, ದಿನಾಲು, ರೈತ, ಒಮ್ಮೆ, ಹದ್ದಿನ, ದಿನ (ಬಿ) ಆಕಾಶ, ದಿನ, ದಿನಾಲು, ರೈತ, ಹದ್ದಿನ, ಒಮ್ಮೆ

(ಸಿ) ಆಕಾಶ, ಒಮ್ಮೆ, ದಿನ, ದಿನಾಲು, ರೈತ, ಹದ್ದಿನ (ಡಿ) ಆಕಾಶ, ಒಮ್ಮೆ, ರೈತ, ದಿನಾಲು, ಹದ್ದಿನ, ದಿನ

**II. ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4*1=4**

7. ಅತಿ ಆಸೆ : ಗತಿ ಕೇಡು : : ಹೊಟ್ಟೆಗೆ ಹಿಟ್ಟಿಲ್ಲ : ____________

8. ರಜ : ದೂಳು : : ಹುಸಿ : ________________

9. ಹಗ್ಗ ಹಾಸಿದೆ ಕೋಣ ಮಲಗಿದೆ : ಕುಂಬಳಕಾಯಿ : : ಬಿಳಿ ಕುದುರೆಗೆ ಹಸಿರು ಬಾಲ : ______________

10. ಆಕಾಶ : ಗಗನ, ಬಾನು : : ಸೂರ್ಯ : __________

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ** **1*7=7**

11. ಅರೋಗ್ಯ, ಪ್ಲಾಸ್ಟಿಕ್, ಉಳಿಸಿ, ತ್ಯಜಿಸಿ, ಕಾಡು, ರಕ್ಷಿಸಿ, ನಾಡು, ಜೀವ, – ಈ ಪದಗಳನ್ನು ಬಳಸಿಕೊಂಡು ಎರಡು ಘೋಷವಾಕ್ಯ ರಚಿಸಿ.
12. ಪ್ಲಾಸ್ಟಿಕೋಪಾಖ್ಯಾನ ನಾಟಕದಲ್ಲಿ ಬರುವ ಪ್ಲಾಸ್ಟಿಕಾಸುರನ ತಂದೆಯ ಹೆಸರೇನು?
13. ಬಳೆಗಾರನಿಗೆ, ಮುತ್ತೈದೆ ತನ್ನ ತಾಯಿಗೆ ಎಂತಹ ಬಳೆಗಳನ್ನು ಕೊಂಡ್ಹೋಗು ಎಂದು ಹೇಳುತ್ತಾಳೆ?
14. ಅಲ್ಲಮ ಪ್ರಭುವಿನ ವಚನದಲ್ಲಿ ಹೇಳಿದಂತೆ ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಹೇಗೆ ಬುದ್ಧಿ ಕಲಿಸಿದರು?
15. ನಿಮಗೆ ಗೊತ್ತಿರುವ ಯಾವುದಾದರು ಎರಡು ಜನಪದ ಕಲೆಗಳ ಹೆಸರನ್ನು ಬರೆಯಿರಿ?
16. ನಿಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆಚರಿಸುವ ಯಾವುದಾದರೂ ಎರಡು ಹಬ್ಬ/ಜಾತ್ರೆಗಳನ್ನು ಹೆಸರಿಸಿ?
17. ಪಾಠ ಕಲಿಸಿದ ಮೃಗರಾಜ ಕಥೆಯಲ್ಲಿ ನರಿಗೆ ಹೆಚ್ಚು ಉಪಟಳವನ್ನು ನೀಡಿದವರು ಯಾರು?

**IV. ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **10*2=20**

18. ಜಲಸಂರಕ್ಷಣೆಯ ವಿಧಾನಗಳಾವುವು ?
19. ಸಖಿ ಯೋಜನೆಯನ್ನು ಜಾರಿಗೆ ತಂದ ಉದ್ದೇಶವೇನು?
20. ಪ್ರವಾಹದಿಂದ ಉಂಟಾಗುವ ಸಮಸ್ಯೆಗಳಾವುವು?
21. ವೀರಗಾಸೆಯ ವೇಷಭೂಷಣಗಳಾವುವು ?
22. ಭಿಕ್ಷೆ ಬೇಡುವುದು ತಪ್ಪೋ? ಸರಿಯೋ ? ಯೋಚಿಸಿ ಬರೆಯಿರಿ.
23. ಸೈಬರ್ ಅಪರಾಧವೆಂದರೇನು ? ಉದಾಹರಣೆ ಕೊಡಿ.
24. ಮೂಲಭೂತ ಹಕ್ಕುಗಳನ್ನು ಪಟ್ಟಿ ಮಾಡಿರಿ.
25. ಪ್ರವಾಸಿ ಸ್ಥಳವಾದ ಜಯಪುರದ ಬಗ್ಗೆ ತಿಳಿಸಿ.
26. ನಿಮ್ಮ ಒಂದು ದಿನದ ದಿನಚರಿಯನ್ನು ಬರೆಯಿರಿ.
27. ಸತ್ಯಾನಂದ ಪಾತ್ರೋಟರ 'ಗಿಡಮರ' ಪದ್ಯದಲ್ಲಿನ ಮರದ ಒಳ್ಳೆಯ ಗುಣಗಳನ್ನು ಪಟ್ಟಿ ಮಾಡಿರಿ.

**V. ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **2*3=6**

28. ರಾಘವಾಂಕ
29. ಬಸವಣ್ಣ

**VI. ಈ ಕೆಳಗಿನ ಸರಣಿ ಚಿತ್ರವನ್ನು ವೀಕ್ಷಿಸಿ ಕಥೆಯೊಂದನ್ನು ಬರೆಯಿರಿ** **1*3=3**

**30.**



**VII. ಈ ಕೆಳಗಿನ ಸರಣಿ ಚಿತ್ರವನ್ನು ವೀಕ್ಷಿಸಿ ಲೇಖನವೊಂದನ್ನು ಸಿದ್ಧಪಡಿಸಿ.** **1*3=3**

**31.**



**VIII. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **1*3=3**

32. ಕೋಟಿ ವಿದ್ಯೆಗಿಂತ, ಮೇಟಿ ವಿದ್ಯೆ ಮೇಲು

**ಅಥವಾ**

ಉಪ್ಪು ತಿಂದವನು ನೀರು ಕುಡಿಯಲೇ ಬೇಕು

**IX. ಈ ಕೆಳಗಿನ ಹೇಳಿಕೆಗಳನ್ನು ಸ್ವಾರಸ್ಯದೊಂದಿಗೆ ಅರ್ಥೈಸಿ ಬರೆಯಿರಿ** **6*3=18**

33. 'ಹಸಿರು ನಮ್ಮೆಲ್ಲರ ಉಸಿರು'
34. 'ಶೌಚಾಲಯ ಇಲ್ಲದ ಮನೆಗೆ ಹೆಣ್ಣು ಕೊಡಬೇಡಿ'
35. 'ಗೆಳೆತನದಲ್ಲಿ ನಂಬಿಕೆ ದ್ರೋಹ ಮಾಡುವುದು ತಪ್ಪು'
36. 'ದುಡಿಯುವವನ ಕಂಡರೆ ಬಡತನ ಓಡುತ್ತದೆ'
37. 'ಹಾವಿನ ಬಾಯಿಗೆ ತುತ್ತಾದರೂ ಸಮಾಜದ ಬಾಯಿಗೆ ತುತ್ತಾಗಬೇಡ'
38. 'ನೀರು ಉಳಿಸಿ; ಭವಿಷ್ಯ ರಕ್ಷಿಸಿ'

**X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ** **1*4=4**

39. ಒಂದು ಮುಂಜಾವಿನಲಿ ____________________

______________________________________

______________________________________

_______________________ನಡುವೆ ನುಸುಳುತಿತ್ತು

**ಅಥವಾ**

ಇಳೆವೆಣ್ಣು ______________________________

______________________________________

______________________________________

_____________________________ಹೊಳೆಯುತ್ತಿತ್ತು

**XI. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ**

40. ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ **1*4=4**
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜತುಂಬಿ.
ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ,
ತನುವಿನೊಳಗೆ ಹುಸಿತುಂಬಿ, ಮನದೊಳಗೆ ವಿಷಯ ತುಂಬಿ.
ಮನೆಯೊಳಗೆ ಮನೆಯೊಡೆಯನಿಲ್ಲ ಕೂಡಲ ಸಂಗಮದೇವ

**XII. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2*4=8**

41. ಪ್ಲಾಸ್ಟಿಕ್ ಬಳಕೆಯಿಂದಾಗುವ ಮಾರಕಗಳೇನು? ಮತ್ತು ಅದರ ಬಳಕೆ ತಪ್ಪಿಸಲು ಪರ್ಯಾಯ ವ್ಯವಸ್ಥೆಗಳಾವುವು?

**ಅಥವಾ**

ತಂಬಾಕಿನ ಉತ್ಪನ್ನಗಳಾವುವು? ಮತ್ತು ಅವುಗಳ ಸೇವನೆಯಿಂದ ಮನುಷ್ಯರ ಆರೋಗ್ಯದ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳಾವುವು?

42. 9ನೇ ತರಗತಿಯ 'ಪಾರಿವಾಳ' ಪದ್ಯದ ಸಾರಾಂಶವನ್ನು ಕಥೆಯ ರೂಪದಲ್ಲಿ ಬರೆಯಿರಿ.

**ಅಥವಾ**

ಯೋಧ ಮತ್ತು ಹೆಂಗಸು ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**XIII.ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **4=(2+2)**

ಮಳೆರಾಜನು ಸುರಿಸುವ ಮಳೆ ನೀರಿನಿಂದಲೇ ರೈತ ಆಹಾರಧಾನ್ಯಗಳನ್ನು ಬೆಳೆಯುತ್ತಾನೆ. ಲತೆಗಳು ಹೂವುಗಳನ್ನು ಕೊಡುತ್ತವೆ. ಗಿಡಮರಗಳು ಹಣ್ಣುಹಂಪಲುಗಳನ್ನು ಕೊಡುವವು. ಹೊಳೆ ಕೆರೆಗಳು ನೀರು ಕೊಡುವುದು ಮಳೆರಾಜನ ಕೃಪೆಯಿಂದಲೇ. ಸಕಲ ಜೀವಿಗಳನ್ನು ರಕ್ಷಿಸುವ ರಾಜನೆಂದರೆ ಅದು ಮಳೆರಾಯನೇ ಆಗಿರುತ್ತಾನೆ. ಹೀಗೆ ಅನ್ನ ನೀರು ನೀಡುವ ಮಳೆರಾಯ ನಮ್ಮ ಪ್ರಕೃತಿಗೆ ವರವಾಗಿದ್ದಾನೆ. ನಮ್ಮ ಶಾರೀರಿಕ ಆರೋಗ್ಯ ಚೆನ್ನಾಗಿರಲು ಒಳ್ಳೆಯ ಶುಚಿಯಾದ ಆಹಾರ ಹಾಗೂ ಸ್ವಚ್ಛ ನೀರು ಬೇಕು. ಅನುಭವಿಗಳು ಇದನ್ನೆ **"ಕೂಳು ಕುತ್ತು; ನೀರು ಪಿತ್ತು"** ಅಂದಿದ್ದಾರೆ. ಅಂದರೆ ಅಶುದ್ಧವಾದ ಆಹಾರ ಹಾಗೂ ಹೊಲಸು ನೀರು ನಮ್ಮ ಶರೀರವನ್ನು ರೋಗಮಯ ಮಾಡುತ್ತವೆ. ಸತ್ತ್ವಯುತ ಬಿಸಿಬಿಸಿಯಾದ, ಹಿತಮಿತವಾದ ಆಹಾರ ಹಾಗೂ ಪರಿಶುದ್ಧವಾದ ನೀರು ಆರೋಗ್ಯಪೂರ್ಣ ಬೆಳವಣಿಗೆಯ ಮುಖ್ಯವಸ್ತುಗಳಾಗಿವೆ.

**ಪ್ರಶ್ನೆಗಳು :**

43. ಅ) ಮಾನವನ ಶರೀರವನ್ನು ಆರೋಗ್ಯಪೂರ್ಣವಾಗಿಸಲು ಅವಶ್ಯವಾದ ವಸ್ತುಗಳಾವುವು?

ಆ) 'ಮಳೆರಾಯ ನಮ್ಮ ಪ್ರಕೃತಿಗೆ ವರವಾಗಿದ್ದಾನೆ' ಹೇಗೆ ?

**XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನಾಧರಿಸಿ ಪತ್ರ ಬರೆಯಿರಿ.** **1*5=5**

44. ನಿಮ್ಮನ್ನು ಬಳ್ಳಾರಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ಸುರಭಿ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಚಿತ್ರಕಲೆ ಸ್ಪರ್ಧೆಯನ್ನು ಕುರಿತು ಮೈಸೂರಿನಲ್ಲಿರುವ ನಿಮ್ಮ ಸ್ನೇಹಿತ/ಸ್ನೇಹಿತೆಗೊಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಬಾಗಲಕೋಟೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ಕಿರಣ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆಯುವ ಗಿಡನೆಡುವ ಕಾರ್ಯಕ್ರಮಕ್ಕೆ ಆಹ್ವಾನಿಸಿ ನಿಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೊಂದು ಪತ್ರ ಬರೆಯಿರಿ.

**XV. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.** **1*5=5**

45. ವರದಕ್ಷಿಣೆ ಒಂದು ಸಾಮಾಜಿಕ ಪಿಡುಗು

**ಅಥವಾ**

ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ